ಶ್ರೀ ವಾಟಾಳ್ ನಾಗರಾಜ್ : ಜಂಟಿ ಸದನ ಸಮಿತಿಯಲ್ಲಿ ಯಾರ್ಯಾರು ಸದಸ್ಯರು ಇದ್ದಾರೆ ಎಂಬುದನ್ನು ಪ್ರಕಟಿಸಬೇಕಾಗಿತ್ತು.

ಶ್ರೀ ಜೆ.ಹೆಚ್ ಪಟೇಲ್ : ಸಮಿತಿ ಕಾನಸ್ಟಿಟ್ಯೂಟ್ ಮಾಡುವುದರ ಬಗ್ಗೆ, ಸನ್ಮಾನ್ಯ ಅಧ್ಯಕ್ಷರು, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆಯಿಸಿಕೊಂಡು, ಸರ್ಕಾರವನ್ನು ಕನಸಲ್ಟ ಮಾಡಿ, ಸಮಿತಿಯನ್ನು ಪ್ರಕಟನೆ ಮಾಡುತ್ತಾರೆ.

ಗಮನ ಸೆಳೆಯುವ ಸೂಚನೆಗಳು

ರಾಜ್ಯದಲ್ಲಿರುವ ರೈತರ ಪಂಪಸೆಟಗಳಿಗೆ ವಿದ್ಯುತ್ ಸಂಪರ್ಕ ಕಲ್ಲಿಸುವ ಮಿತಿಯನ್ನು ಕಡಿಮೆಗೊಳಿಸಿರುವುದರಿಂದ ಉಂಟಾಗಿರುವ ತೊಂದರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಪಂಪಸೆಟಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮಿತಿಯನ್ನು ಕಡಿಮೆಗೊಳಿಸಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ ಸನ್ಮಾನ್ಯ ಉಪ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ೧೯೯೦-೯೧ರ ಸಾಲಿನಿಂದ ಪ್ರತೀ ವರ್ಷ ಸುಮಾರು ೫೦,೦೦೦ ರಿಂದ ೬೦,೦೦೦ ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸುತ್ತಿದೆ. ಇದರಿಂದಾ ಪ್ರತಿ ವರ್ಷ ಸುಮಾರು ೩೦೦ ಮೆಗಾವಾಟ್ ಲೋಡ್ ಹೆಚ್ಚುವರಿಯಾಗಿ ವ್ಯವಸ್ಥೆಗೆ ಸೇರ್ಪಡೆಯಾಗುತ್ತಿದೆ. ಈ ದಿನದಲ್ಲಿರುವಂತೆ ರಾಜ್ಯದ ಒಟ್ಟು ವಿದ್ಯುತ್ ಉತ್ಪಾದನಾ ಸಾಮಾರ್ಥ್ಯ ೩೩೫೫ ಮೆಗಾವಾಟ್ ಆಗಿದೆ ಮತ್ತು ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಸುಮಾರು ೬೦೦ ಮೆಗಾವಾಟ್ ವಿದ್ಯುತ್ ಲಭ್ಯವಿದ್ದು, ೧೯೯೪-೯೫ ರ ಸಾಲಿನಲ್ಲಿ ೩೨೨೪ ಮೆಗಾವಾಟ್ ಪೀಕ್ ಲೋಡನ್ನು ನೀಗಲು ರಾಜ್ಯಕ್ಕೆ ಸಾಧ್ಯವಾಗಿದೆ. ವ್ಯವಸ್ಥೆಯಲ್ಲಿನ ಇತಿಮಿತಿ ಮತ್ತು ಬೇಕಾಗುವಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಇಲ್ಲದಿರುವುದರಿಂದ ರಾಜ್ಯದಲ್ಲಿ ಪೀಕ್ ಲೋಡ್ ವೇಳೆಗಳಲ್ಲಿ ಅನಿಯಮಿತ ಲೋಡ್ ಷೆಡ್ಡಿಂಗನ್ ನಿರ್ವಹಿಸಬೇಕಾಗಿದೆ. ಅಲ್ಲದೇ ಗ್ರಾಮಾಂತರ ಪ್ರದೇಶಗಳಲ್ಲಿ ೬ ಗಂಟೆಗಳ ಅವಧಿಯ ನಿಯಮಿತ ಲೋಡ್ ಷೆಡ್ಡಿಂಗನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ನಿರ್ಮಾಣದ ಹಂತದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳ ನಿರ್ಮಾಣದ ಪ್ರಗತಿಯನ್ನು ಗಮಿಸಿದಾಗ ಮುಂಬರುವ ಎರಡು ವರ್ಷಗಳಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಆಗುವ ಸಂಭವವಿರುವುದಿಲ್ಲ. ಹಾಲಿ ಇರುವ ನೀರಾವರಿ ಪಂಪು ಸೆಟ್ಟುಗಳ ಬಳಕೆದಾರರಿಗೆ ಮತ್ತು ಇತರೆ ವಿದ್ಯುತ್ ಬಳಕೆದಾರರಿಗೆ ಒಳ್ಳೆಯ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವಲ್ಲಿ ಮಂಡಳಿಯು ಬಹಳ ಸಮಸ್ಯೆಯನ್ನು ಎದುರಿಸುತ್ತಿದೆ. ಕಡಿಮೆ ಮೋಲ್ಟೇಜ್ ಮತ್ತು ವಿದ್ಯುತ್ ಸರಬರಾಜಿನಲ್ಲಿ ಅಡಚಣೆಗಳಿಂದಾಗಿ ರಾಜ್ಯದಲ್ಲಿ ರೈತರು ತಮ್ಮ ಅಸಮಾಧಾನವನ್ನು ಸೂಚಿಸಲು ಬಹಳ ಕಡೆ ಧರಣಿ, ಬೀಗಮುದ್ರೆಗಳಂತಹ ಆಂದೋಲನಗಳನ್ನು ನಡೆಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ರಾಜ್ಯವು ಕಡಿಮೆ ಮಳೆಯಿಂದಾಗಿ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ದಿನದಲ್ಲಿರುವಂತೆ ಶರಾವತಿ ಮತ್ತು ಕಾಳಿ ಯೋಜನೆಗಳ ಜಲಾಶಾಯಗಳಲ್ಲಿ ಅನುಕ್ರಮವಾಗಿ ಕೇವಲ ಶೇಕಡ ೪೫ ಮತ್ತು ೩೩ ಪ್ರಮಾಣದಲ್ಲಿ ನೀರು ಶೇಖರಣೆಯಾಗಿದೆ. ಇದರಿಂದ ಈ ಸಾಲಾದ ೯೫-೯೬ರಲ್ಲಿ ವಿದ್ಯುತ್ ಉತ್ಪಾದನೆ ಕುಂಠಿತಗೊಳ್ಳಲಿದೆ. ಈ ಕಾರಣದಿಂದ ಮುಂಬರುವ ವರ್ಷದಲ್ಲಿ ಮುಂಗಾರು ಪ್ರಾರಂಭವಾಗುವವರೆಗೆ ಹಾಲಿ ಶೇಖರಣೆಯಾಗಿರುವ ನೀರನ್ನು ನ್ಯಾಯಯುತವಾಗಿ ಬಳಸಿಕೊಂಡು ವಿದ್ಯುತ್ ಸರಬರಾಜನ್ನು ಮಾಡುವುದು ಅನಿವಾರ್ಯವಾಗಿದೆ.

ಇದೇ ಸಂದರ್ಭದಲ್ಲಿ ತಿಳಿಸುವುದೇನೆಂದರೆ, ಉತ್ಪಾದಿಸಲಾಗುವ ವಿದ್ಯುತ್ತಿನ ಶೇಖಡ ೪೩ ರಷ್ಟನ್ನು ಮಂಡಳಿಯು ಕೇವಲ ನೀರಾವರಿ ಪಂಪುಸೆಟ್ಟುಗಳಿಗೆ ಸರಬರಾಜು ಮಾಡುತ್ತಿದ್ದು ಇದರಿಂದ ಬರುತ್ತಿರುವ ಆದಾಯ ಬಹಳ ಕಡಿಮೆ, ಅಂದರೆ ಶೇಕಡೆ ೧.೧೨ ರಷ್ಟು ಮಾತ್ರ ಆದಾಯ ಲಭ್ಯವಾಗುತ್ತಿದೆ. ಇದರಿಂದ ಮಂಡಳಿಯ ಸಂಪನ್ಮೂಲ ಕ್ರೋಢೀಕರಣದ ಮೇಲೆ ಪ್ರತೀಕುಲ ಪರಿಣಾಮ ಉಂಟಾಗಿದೆಯಲ್ಲದೆ, ಮಂಡಳಿಯ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳು ಅಡಚಣೆಯುಂಟು ಮಾಡಿದೆ. ಹಾಗೆಯೇ ಪ್ರತಿಯೊಂದು ನೀರಾವರಿ ಪಂಪುಸೆಟ್ಟು ವಿದ್ಯುದ್ದೀಕರಣಕ್ಕೆ ಮಂಡಳಿಯ ಸುಮಾರು ೧೬,೦೦೦ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದರಂತೆ ೪೫,೦೦೦ ಸುಮಾರು ೧೬,೦೦೦ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದರಂತೆ ೪೫,೦೦೦ ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಣ ಗೊಳಿಸಲು ಈ ವರ್ಷ ೭೨ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಜಲಾಶಯಗಳ ಮಟ್ಟ ಕ್ಷೀಣ ಗೊಂಡಿರುವುದರಿಂದ ಮುಂದಿನ ಮುಂಗಾರು ಆರಂಭವಾಗುವವರೆಗಿನ ಮಂಡಳಿಯ ರೆವಿನ್ಯೂವಿನಲ್ಲಿ ಉಂಟಾಗುವ ಇಳಿಕೆಯ ಸುಮಾರು ೨೪೪ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಆದ್ದರಿಂದ ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಲು ಮತ್ತು ಕಡಿಮೆ ಉತ್ಪಾದನೆಯ ಅವಧಿಯಲ್ಲಿ ವಿದ್ಯುತ್ ಸರಬರಾಜಿನ ವ್ಯವಸ್ಥೆಯನ್ನು ಸುಗಮವಾಗಿ ನಿರ್ವಹಿಸಲು ಅನುಕೂಲವಾಗುವಂತೆ ನೀರಾವರಿ ಸೆಟ್ಟುಗಳ ವಿದ್ಯುದ್ದೀಕರಣದ ಗುರಿಯನ್ನು ೪೫೦೦೦ಕ್ಕೆ ಇಳಿಸದೆ ಮಂಡಳಿಗೆ ಅನ್ಯ ಮಾರ್ಗವೇ ಇಲ್ಲವಾಗಿದೆ.

ಮೇಲಿನ ವಿವರಣೆಗಳ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರಕ್ಕೆ ಎಲ್ಲ ಸಂಗತಿಗಳನ್ನು ನಿವೇದಿಸುತ್ತಾ ೧೯೯೫-೯೬ನೇ ಸಾಲಿನ ಅವಧಿಯಲ್ಲಿ ಸುಮಾರು ೪೫,೦೦ ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಣ ಗೊಳಿಸಲು ಮಂಡಳಿಯ ಯೋಜಿಸಿದೆ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯವಾಗಿರತಕ್ಕ ಪ್ರಶ್ನೆ ಏನೆಂದರೆ, ದಿನಾಂಕ ೧೬.೩.೯೫ರಲ್ಲಿ ಕೆ.ಇ.ಬಿ.ಯವರು ಆದೇಶ ಸಂಖ್ಯೆ ಕೆಇಬಿ: ೧೯:೯೪-೯೫ ನ್ನು ಹೊರಡಿಸಿದ್ದಾರೆ. ಅದರ ಪ್ರಕಾರ ಏನಾಗಿದೆ ಎಂದರೆ, ಪಂಪೆಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವುದರೊಳಗೆ ಕಡಿತಗೊಳಿಸಲಾಗಿದೆ. ಅದು ಪ್ರತ್ಯೇಕವಾಗಿ ನಮ್ಮ ಕೋಲಾರ ಜಿಲ್ಲೆಯಂತಹ ಜಿಲ್ಲೆಗೆ, ಬರೀ ಪಂಪಸೆಟ್ಟುಗಳಿಂದಲೇ ವ್ಯವಸಾಯವನ್ನು ಮಾಡತಕ್ಕ ಒಂದು ಪರಿಸ್ಥಿತಿ ಇರತಕ್ಕ ಸಂದರ್ಭದಲ್ಲಿ, ನಮ್ಮ ಜಿಲ್ಲೆಯಲ್ಲಿ ನದಿಗಳು ಇಲ್ಲ, ನಾವೆಗಳು ಇಲ್ಲ, ಬೇರೆ ಯಾವ ರೀತಿಯಲ್ಲೂ

ನೀರು ಸರಬರಾಜು ಮಾಡಿ ವ್ಯವಸಾಯ ಸ್ತಬ್ಧವಾಗುತ್ತದೆ. ಎರಡನೆಯದಾಗಿ, ಇವತ್ತು ರೈತರು ೫೦-೬೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬೋರವೆಲಗಳನ್ನು ಈಗಾಗಲೇ ಅವರು ಹಾಕಿಸಿದ್ದಾರೆ. ರೈತರು ಬ್ಯಾಂಕುಗಳಿಂದ ಸಾಲ ಮಾಡಿ, ಪ್ರೈವೇಟನವರಿಂದ ಸಾಲ ಮಾಡಿ, ಬೋರವೆಲಗಳನ್ನು ಹಾಕಿಸಿಕೊಂಡಿರುತ್ತಾರೆ. ಹೀಗಿರುವಾಗ, ಅವರಿಗೆ ಈಗ ವಿದ್ಯುತ್ ಕನೆಕ್ಷನ್ ಕೊಡುವುದಿಲ್ಲ, ಸರಬರಾಜು ಮಾಡುವುದಿಲ್ಲ, ಅದಕ್ಕೆ ಮಿತಿ ಹಾಕಿದ್ದೇವೆ ಎಂದು ಹೇಳಿದರೆ, ರೈತರು ಸಂಪೂರ್ಣವಾಗಿ ದಿವಾಳಿಯಾಗತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಉದಾಹರಣೆಗೆ ನಮ್ಮ ಕೋಲಾರ ಜಿಲ್ಲೆಗೆ ಹಿಂದಿನ ವರ್ಷ ೪೫೭೦ ವಿದ್ಯುತ್ ಪಂಪಸೆಟ್ಟುಗಳಿಗೆ ಕನೆಕ್ಷನ್ ಕೊಡಲಾಗಿತ್ತು. ಈ ವರ್ಷ ಅದನ್ನು ದಿನಾಂಕ ೧೬.೩.೯೫ರ ಆದೇಶದ ಪ್ರಕಾರ ಇಡೀ ಜಿಲ್ಲೆಗೆ ೧೧೦೦ ಕನೆಕ್ಷನಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ಅಂದಾಜಿನಲ್ಲಿ ಇಡೀ ರಾಜ್ಯದಲ್ಲಿ ಶೇಕಡ ೭೫ರಷ್ಟು ವಿದ್ಯುತ್ ಸಂಪರ್ಕಗಳನ್ನು ಕಡಿತ ಮಾಡಿರುವುದರಿಂದ ವಿದ್ಯುತ್ ಪಂಪಸೆಟ್ಟುಗಳನ್ನು ಆಧರಿಸಿಯೇ ವ್ಯವಸಾಯ ಮಾಡತಕ್ಕ ರೈತರ ಪರಿಸ್ಥಿತಿ ಗಂಭೀರವಾಗಿದೆ. ೫೦-೬೦ ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡು ಈಗಾಗಲೇ ಪಂಪಸೆಟ್ಟುಗಳನ್ನು ಹಾಕಿಸಿಕೊಂಡಿರುವ ಅವರುಗಳಿಗೆ, ಈಗ ವಿದ್ಯುತ್ ಕನಕ್ಷನ್ ಕೊಡದೇ ಹೋದರೆ, ಇದು ನಿಜವಾಗಿಯೂ ರೈತರಿಗೆ ಬಹಳಷ್ಟು ತೊಂದರೆ ಕೊಟ್ಟು ಅವರಿಗೆ ಮೋಸ ಮಾಡಿದ ರೀತಿಯಲ್ಲಿ ಆಗುತ್ತದೆ. ಅವರನ್ನು ದಿವಾಳಿ ಎಬ್ಬಿಸುವ ರೀತಿಯಲ್ಲಿ ಆಗುತ್ತದೆ. ಆದದುರಿಂದ ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಪಂಪಸೆಟ್ಟುಗಳನ್ನು ಆಧರಿಸಿಯೇ ವ್ಯವಸಾಯ ಮಾಡತಕ್ಕ ಜಿಲ್ಲೆಗಳಿಗೆ, ಅದರಲ್ಲೂ ಪ್ರಮುಖವಾಗಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಪಂಪಸೆಟ್ಟುಗಳಿಗೆ, ಅದರಲ್ಲೂ ಪ್ರಮುಖವಾಗಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಪಂಪಸೆಟ್ಟುಗಳಿಗೆ ವಿದ್ಯುತ್ ಕಡಿತವನ್ನು ಮಾಡಬಾರದು, ಹಿಂದೆ ಇದ್ದಂತೆ ನಮಗೆ ಮುಂದುವರೆಸಬೇಕು ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯದ ಒಟ್ಟು ಸಂಖ್ಯೆಯಲ್ಲಿ ಅಂದರೆ ಐರವತ್ತು ಸಾವಿರ, ಎಪ್ಪತ್ತು ಸಾವಿರವೆಂದು ನಾವೇನು ಮೊದಲು ಗುರಿಯನ್ನು ಇಟ್ಟುಕೊಳ್ಳುತ್ತಿದ್ದೇವು, ಅದನ್ನು ನಾನು ಈಗಾಗಲೇ ಸದನದ ಮುಂದೆ ವಿವರಿಸಿದ ಕಾರಣಗಳಿಂದಾಗಿ, ರಾಜ್ಯದ ಗುರಿ ಎಂದು ಏನಿದೆ ಅದನ್ನು ಕಡಿಮೆ ಮಾಡಿದ್ದೇವೆ. ಆದರೆ ಮಾನ್ಯ ಸದಸ್ಯರ ಸೂಚನೆ ಮಾಡಿದ ಹಾಗೆ ವಿಶೇಷ ಪರಿಸ್ಥಿತಿ ಇರತಕ್ಕಂತಹ ಜಿಲ್ಲೆಗಳಲ್ಲಿ, ಒಟ್ಟು ನಲ್ವತ್ತೈದು ಸಾವಿರದ ಗುರಿಯೊಳಗೆ, ಉದಾಹರಣೆಗೆ ಬ್ಯಾಂಕನಲ್ಲಿ ಸಾಲ ತೆಗೆದುಕೊಂಡು ಬಂದು ಬಡ್ಡಿ ಕಟ್ಟತಕ್ಕಂತಹವರಿಗೆ, ಇಂತಹ ತೀರ ಅನಿವಾರ್ಯ ಪ್ರಸಂಗಗಳನ್ನು ಗುರುತಿಸಿ, ಆದ್ಯತೆ ಕೊಡಬೇಕೆಂದು ಕೆ.ಇ.ಬಿ.ಗೆ ಸೂಚನೆ ಕೊಡುತ್ತೇನೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೋದ ವರ್ಷ ನಮ್ಮ ಜಿಲ್ಲೆಗೆ ೪೫೭ ಗುರಿ ಇತ್ತು. ಈಗ ನೀವು ಯಾವ್ಯಾವ ಅನಿವಾರ್ಯ ಪ್ರಸಂಗಗಳಿವೆ ಎಂದು ಹೇಳಿದರೆ, ನಮ್ಮ ಜಿಲ್ಲೆಯಲ್ಲಿ ಎಲ್ಲವೂ ಆ ರೀತಿಯಲ್ಲೇ ಇರತಕ್ಕಂತಹದ್ದು, ಬೇರೆ ಯಾವುದೇ ರೀತಿಯಲಿಲ್ಲ. ಆದುದರಿಂದ ನೀವು ನಮ್ಮ ಜಿಲ್ಲೆಗೆ ಅಷ್ಟನ್ನಾದರೂ

ಮುಂದುವರೆಸಬೇಕು. ಕೋಲಾರ ಜಿಲ್ಲೆಗೆ ಕನಿಷ್ಟ, ಹಿಂದಿನ ವರ್ಷ ೪೫೭೦ ಗುರಿ ಇತ್ತು, ಇಷ್ಟನ್ನಾದರೂ ಮುಂದುವರೆಸಲೇ ಬೇಕು. ನಮಗೆ ಬೇರೆ ಮಾರ್ಗವೇ ಇಲ್ಲ, ದಾರಿಯೇ ಇಲ್ಲ.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೆ, ಈಗ ಏನಾಗಿದೆ ಎಂದರೆ, ಈ ಮಧ್ಯೆ ಗಲಾಟೆಯಲ್ಲಿ ಗಮನಸೆಳೆಯುವ ಸೂಚನೆಗಳು ಇವೆಲ್ಲಾ ನಿಮಗೆ ಪರಿಚಯವಿಲ್ಲ. ನೀವು ಸರ್ಕಾರದ ಗಮನವನ್ನು ಸೆಳೆಯುತ್ತೀರಿ, ಅವರು ನಿಮಗೆ ಒಂದು ಹೇಳಿಕೆಯ ನಕಲು ಪ್ರತಿಯನ್ನು ಕೊಟ್ಟು ಹೇಳಿಕೆಯನ್ನು ಓದುತ್ತಾರೆ. ಅದರ ಮೇಲೆ ಸ್ಪಷ್ಟೀಕರಣ ಕೇಳತಕ್ಕಂತಹದ್ದು, ಸುಮಾರು ಜನ ಸದಸ್ಯರುಗಳ ಕೈ ಎತ್ತಿದ್ದೀರಿ. ಗಮನ ಸೆಳೆಯುವ ಸೂಚನೆಗೆ ಯಾರು ಸಹಿ ಹಾಕಿರುತ್ತಾರೆ, ಅವರಿಗೆ ಸ್ಪಷ್ಟೀಕರಣ ಕೇಳತಕ್ಕಂತಹ ಹಕ್ಕಿರುತ್ತದೆ. ಅವರ ಸ್ಪಷ್ಟೀಕರಣವನ್ನು ಕೇಳಿದ್ದೀರಿ ದಯಮಾಡಿ, ಎತ್ತಿರತಕ್ಕಂತಹ ಕೈಗಳು ಕೆಳಗಿಳಿಸಿ.

ಶ್ರೀ ವಾಟಾಳ್ ನಾಗರಾಜ್ : ನಾನು ಸ್ಪಷ್ಟೀಕರಣವನ್ನು ಕೇಳುತ್ತಿಲ್ಲ, ಇವತ್ತು ಈ ಪ್ರಶ್ನೋತ್ತರ ಕಾಲವಿಲ್ಲವೆಂದು ತಾವು ತೀರ್ಮಾನ ಮಾಡಿದ್ದೀರಿ? ನಮ್ಮೆಲ್ಲರ ಗತಿಯೇನು?

ಅಧ್ಯಕ್ಷರು : ಹೌದು, ನಾನೇನು ಮಾಡಲಿ, ಪ್ರಶ್ನೋತ್ತರ ಕಾಲ ಮುಗಿದಿದೆ. ಶ್ರೀಮಾನ್, ಶಿವನಂಜಪ್ಪ, ಶಿವರಾಮೇಗೌಡ, ಜಯಚಂದ್ರ, ಶಿವಕುಮಾರ್, ಮುದ್ದಹನುಮೇಗೌಡ ಮತ್ತು ನಂಜಮರಿಯವರು ಇವರೆಲ್ಲಾ ಸೇರಿ ಕೊಬ್ಬರಿ ಬೆಲೆ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಆಮೇಲೆ ಮಾತನಾಡೋಣ ನಂಜಮರಿಯವರ ಕೂತುಕೊಳ್ಳಿ, ನಿಮ್ಮ ಆತುರ ನನಗೆ ಗೊತ್ತಿದೆ, ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ, ಮೊದಲು ಅವರು ಗಮನ ಸೆಳೆಯಲಿ.

ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿದಿರುವುದರಿಂದ ತುಮಕೂರು, ಹಾಸನ, ಮಂಡ್ಯ, ಚಿತ್ರದುರ್ಗ ಹಾಗೂ ಇತರ ಜಿಲ್ಲೆಗಳ ತೆಂಗು ಬೆಳೆಗಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಅಧ್ಯಕ್ಷರ ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿದಿರುವುದರಿಂದ ತುಮಕೂರು, ಹಾಸನ, ಮಂಡ್ಯ ಚಿತ್ರದುರ್ಗ ಹಾಗೂ ಇತರ ಜಿಲ್ಲೆಗಳ ತೆಂಗು ಬೆಳೆಗಾರರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಕೃಷಿ ಮಾರುಕಟ್ಟೆ ರಾಜ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜಿ.ಜಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ, ಜಿ.ಎಸ್. ಶಿವನಂಜಪ್ಪ, ಎಲ್.ಆರ್. ಶಿವರಾಮೇಗೌಡ, ಟಿ.ಬಿ.ಜಯಚಂದ್ರ, ಡಿ.ಕೆ. ಶಿವಕುಮಾರ್, ಮುದ್ದಹನುಮೇಗೌಡ ಹಾಗೂ ಇತರರು ತಂದಿರುವ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡಂತೆ ಉತ್ತರವನ್ನು ನೀಡುತ್ತಿದ್ದೇನೆ.

ಕೊಬ್ಬರಿಗೆ ರಾಜ್ಯದಲ್ಲಿ ತಿಪಟೂರು, ಅರಸೀಕರೆ ಪ್ರಾಮುಖ್ಯ ಮಾರುಕಟ್ಟೆಗಳಾಗಿವೆ. ಹುಳಿಯಾರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಕೆ.ಆರ್. ಪೇಟೆ, ಚೆನ್ನರಾಯಪಟ್ಟಣ ಈ ಮಾರುಕಟ್ಟೆಗಳಲ್ಲಿ ತೆಂಗಿನಕಾಯಿ, ವ್ಯಾಪಾರ ನಡೆದೂ ಸಹ ಕೊಬ್ಬರಿ ಮಾರಾಟ ವ್ಯವಹಾರ ಸಾಕಷ್ಟು ಇರುವುದಿಲ್ಲ.